# ನಟನ ರಂಗಶಾಲೆ

**(ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ)**

---

## ರಂಗಭೂಮಿ ಡಿಪ್ಲೊಮಾ 2022–23

### ನೇರ ಸಂದರ್ಶನದಲ್ಲಿ(ಆಡಿಷನ್) ಭಾಗವಹಿಸುವ ಅಭ್ಯರ್ಥಿಗಳಿಗೆ ಸೂಚನೆಗಳು:

- ನೇರ ಸಂದರ್ಶನದಲ್ಲಿ ಅಭ್ಯರ್ಥಿಯ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಸಂದರ್ಶನಕ್ಕೆ ಬರುವಾಗ ಕನಿಷ್ಠ 5 ನಿಮಿಷದ ಪೌರಾಣಿಕ/ ಐತಿಹಾಸಿಕ/ ಸಾಮಾಜಿಕ/ ಗಂಭೀರ/ ಹಾಸ್ಯ/ ಸ್ವರಚಿತ/ ವಾಸ್ತವವಾದಿ/ ಶೈಲೀಕೃತ ಅಥವಾ ಇನ್ನಾವುದೇ ಮಾದರಿಯ ಅಭಿನಯದ ತುಣುಕನ್ನು ಅಭಿನಯಿಸಲು ಸಿದ್ಧರಾಗಿರಬೇಕು.
- ಪ್ರಖ್ಯಾತ ನಾಟಕಕಾರರ ಯಾವುದಾದರೂ ಎರಡು ನಾಟಕಗಳನ್ನು ಮೊದಲೇ ಓದಿಕೊಂಡು, ಅವುಗಳ ಬಗ್ಗೆ ಕನಿಷ್ಠ 2 ನಿಮಿಷಗಳ ಕಾಲ ಮಾತನಾಡಬೇಕು.
- ಯಾವುದಾದರೂ ಒಂದು ಹಾಡನ್ನು(ರಂಗಗೀತೆ/ ಜಾನಪದ/ ಶಾಸ್ತ್ರೀಯ/ ಭಾವಗೀತೆ/ ಲಘು ಸಂಗೀತ /ಇತರೆ) ಹಾಡಲು ಅಭ್ಯಾಸ ಮಾಡಿಕೊಳ್ಳಬೇಕು.
- ನಟನೆ, ನಾಟಕ, ರಂಗಭೂಮಿ ಕುರಿತ ನಿಮ್ಮ ಆಸಕ್ತಿ, ಸೆಳೆತ ಮತ್ತು ಅವುಗಳಲ್ಲಿ ನಿಮ್ಮ ಭಾಗವಹಿಸುವಿಕೆಯ ಕುರಿತು ಮಾತನಾಡಲು ಸಿದ್ಧರಾಗಿರಬೇಕು.
- ಯಾವುದಾದರೂ ನೃತ್ಯ ಪ್ರಕಾರ, ಜನಪದ ಕಲಾ ಪ್ರಕಾರ ಅಥವಾ ಸಮರ ಕಲೆಗಳ ಪರಿಚಯವಿದ್ದಲ್ಲಿ ಅವುಗಳ ಪ್ರಸ್ತುತಿಗೆ ತಯಾರಿ ಮಾಡಿಕೊಳ್ಳತಕ್ಕದ್ದು.
- ವಿಶೇಷ ಪ್ರತಿಭೆಗಳೇನಾದರೂ ಇದ್ದರೆ ಅವುಗಳನ್ನೂ ಪ್ರದರ್ಶಿಸಬಹುದು.
- ಸಂದರ್ಶಕರು ಕೇಳುವ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸಲು ಮತ್ತು ಕೊಡುವ ಆಶು ವಿಸ್ತರಣೆಯಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ದೈಹಿಕವಾಗಿ, ಮಾನಸಿಕವಾಗಿ ಸಿದ್ಧರಾಗಿರತಕ್ಕದ್ದು.
- ಪ್ರವೇಶ ಅರ್ಜಿಯೊಂದಿಗೆ ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಭಾವಚಿತ್ರ, ಆಧಾರ್ ಕಾರ್ಡ್‌ನ ಪ್ರತಿಯನ್ನು ಲಗತ್ತಿಸುವುದು ಕಡ್ಡಾಯ.
- ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು **09.08.2022**ರಂದು ನಟನದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್ ಮೂಲಕ ತಿಳಿಸಲಾಗುತ್ತದೆ. ಅಭ್ಯರ್ಥಿಗಳು **10.08.2022**ರ ಒಳಗಾಗಿ ತಮ್ಮ ಬರುವಿಕೆಯನ್ನು ಖಚಿತಪಡಿಸತಕ್ಕದ್ದು. ಇಲ್ಲವಾದಲ್ಲಿ ಕಾಯ್ದಿರಿಸಿದ ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಲಾಗುವುದು. **11.08.2022**ರಂದು ಪರಿಷ್ಕೃತ ಎರಡನೇ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಪ್ರವೇಶ ಶುಲ್ಕವನ್ನು ಪಾವತಿಸಲು ಕಡೆಯ ದಿನಾಂಕ: **28.08.2022.**
- ಕೋವಿಡ್ ನಿಯಮ ಪಾಲಿಸಿ. ಮಾಸ್ಕ್ ಧರಿಸಿ. ಸಾನಿಟೈಸರ್ ಬಳಸಿ. ಸಾಮಾಜಿಕ ಅಂತರ ಕಾಪಾಡಿಕೊಳ್ಳಿ.

---

**ನೇರ ಸಂದರ್ಶನ ನಡೆಯುವ ದಿನಾಂಕ: 07.08.2022. ಸಮಯ: ಬೆಳಿಗ್ಗೆ 10.00ಕ್ಕೆ**

**ಸ್ಥಳ: ನಟನ ರಂಗಶಾಲೆ, ರಾಮಕೃಷ್ಣ ನಗರ 'ಕೆ' ಬ್ಲಾಕ್, ಮೈಸೂರು**